INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,65- 73
Peer Reviewed Journal, Referred Journal

# ವರ್ಣರಹಿತ ಸಮಾಜ ಸುಧಾರಕ ಬಸವಣ್ಣ

ಡಾ.ಎಸ್.ಬಿ.ಚನ್ನಗೌಡ್ರ.[1]

ವಿಶ್ವಬಂಧುತ್ವವನ್ನು ಬೋಧಿಸಿದ ಜಗಜ್ಯೋತಿ ಬಸವಣ್ಣನವರು 900 ವರ್ಷಗಳ ಹಿಂದೆ ಶೋಷಿತರ ಧ್ವನಿಯಾಗಿ ಮಾನವಕುಲದ ಸ್ವಾತಂತ್ರ್ಯ ಜ್ಯೋತಿಯನ್ನು ಬೆಳಗಿಸಿದ ಮಹಾ ಮಾನವತಾವಾದಿ. ಸಕಲ ಜೀವಾತ್ಮರಿಗೆ ಲೇಸನು ಬಯಸಿ ವಿಶ್ವದಲ್ಲಿ ಸರ್ವಸಮಾನತೆಯನ್ನು ಸಾರಿ ಅಲ್ಲಿಂದ ಇಲ್ಲಿಯವರೆಗೂ ಅನೂಚಾನವಾಗಿ ಬಸವಣ್ಣ ಎಲ್ಲರ ಹೃದಯದಲ್ಲಿ ಬೆಳಗುತ್ತಿದ್ದಾರೆ. ಬಸವೇಶ್ವರನೆಂಬುದು ಬರಿ ಹೆಸರಾಗಿ ಉಳಿಯದೇ ಒಂದು ಅದ್ಭುತ ಶಕ್ತಿಯಾಗಿ ಸೃಜನಶೀಲ ತತ್ವವಾಗಿ ಬಯಲಾದರೂ ಬಯಲಾಗದೇ ವಚನ ಶರೀರಿಯಾಗಿ ನಮ್ಮೊಂದಿಗಿದ್ದಾರೆ. ಬಸವಣ್ಣ ವಿರಾಟ್ ಶಕ್ತಿ, ಸ್ಥಾವರವಲ್ಲ ಜಂಗಮಶಕ್ತಿ. ಜ್ಞಾನ ಬಹಳ ಶ್ರೇಷ್ಠವಾದುದು ಜ್ಞಾನವಿಲ್ಲದಿದ್ದರೆ ಯಾವ ಸಾಧನೆಗಳು ಸಾಧ್ಯವಿಲ್ಲ. ಜ್ಞಾನದ ಬಲವೊಂದಿದ್ದರೆ ಏನೂ ಬೇಕಾದರೂ ಸಾಧಿಸಬಹುದು. ಜ್ಯೋತಿಯ ಬೆಳಕಿನಿಂದ ಕತ್ತಲೆಯನ್ನು ಕಳೆಯುವಂತೆ ಜ್ಞಾನದಿಂದ ಅಜ್ಞಾನ ಪಲಾಯನಗೈಯುವುದು. ಮಾನವತೆ ಮೈಗೂಡಬೇಕಾದರೆ ಮೊದಲು ಜ್ಞಾನವೇ ಬೇಕು, ಅಂತಹ ಮಹಾ ಜ್ಞಾನಿ ಬಸವಣ್ಣ.

ಬಸವಣ್ಣನವರ ಕಾಲದಲ್ಲಿ ಕಂಡುಬರುವ ಸಾಮಾಜಿಕ ಅಸಮಾನತೆ, ಅನಿಷ್ಟ ಜಾತಿ ಪದ್ಧತಿ, ಮೂಡ ನಂಬಿಕೆ, ಸ್ತ್ರೀಯರಿಗೆ ಸ್ವಾತಂತ್ರ್ಯ ಇಲ್ಲದಿರುವುದು, ರಾಜಕೀಯ, ಧಾರ್ಮಿಕ, ಆರ್ಥಿಕ ಅಸ್ಥಿರತೆ, ಅಸಮಾನತೆ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಕೆಳವರ್ಗದವರಿಗೆ ಹೆಚ್ಚು ಅವಕಾಶ ಇಲ್ಲದಿರುವುದನ್ನು ಕಂಡು ಬಸವಣ್ಣನವರು ಹೊಸ ಸಮಾಜವನ್ನು ನಿರ್ಮಿಸುವುದರ ಮೂಲಕ ಸಮಾಜದಲ್ಲಿ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಸಮಾಜದ ಪ್ರತಿ ಹಂತದಲ್ಲಿ ತನ್ನದೇ ಆದ ವಿಚಾರಗಳ ಮೂಲಕ ಬಹುದೊಡ್ಡ ಕ್ರಾಂತಿಮಾಡಿ ಸುಂದರ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಹಾಕಿದರು. ಸಂಪ್ರದಾಯವನ್ನು ತಮ್ಮ ವಚನಗಳ ಮೂಲಕ ವೈಚಾರಿಕ ವಿಚಾರಗಳಿಂದ ಸಮಾಜಕ್ಕೆ ಹೊಸ ಬೆಳಕನ್ನು ತಂದುಕೊಟ್ಟು ಹೊಸ ಸಮಾಜವನ್ನು ಕಟ್ಟಬೇಕೆಂಬ ಪಣತೊಟ್ಟರು. ಶೂದ್ರರಾದ ರೈತಾಪಿ ಜನರು, ಕಾಯಕ ಜೀವಿಗಳು, ಮಹಿಳೆಯರು ಮತ್ತು ಪಂಚಮರು ಈ ದೇಶದಲ್ಲಿ ಸಹಸ್ರಾರು ವರ್ಷಗಳಿಂದ ಮನುಧರ್ಮದ ಪುರುಷ ಪ್ರಧಾನವಾದ ವರ್ಣ ವ್ಯವಸ್ಥೆಯಿಂದಾಗಿ ಪಡಬಾರದ ಕಷ್ಟಪಟ್ಟಿದ್ದಾರೆ. ಮೇಲ್ವರ್ಗ ಮತ್ತು ಮೇಲ್ಜಾತಿಯ

---

[1].ಮುಖ್ಯಸ್ಥರು, ಕನ್ನಡ ವಿಭಾಗ ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು.

ಜನರು ಸುಖಭೋಗಗಳನ್ನು ಅನುಭವಿಸುತ್ತಿದ್ದಾರೆ. ಸಮಾಜದ ಪರಿವರ್ತನೆಯಲ್ಲಿ ತೊಡಗಿದ ಕಾಯಕ ಜೀವಿಗಳಿಗೆ, ಶ್ರಮ ಜೀವಿಗಳಿಗೆ, ಪಂಚಮರಿಗೆ ಅನ್ಯಾಯವಾಗುತ್ತಿರುವುದನ್ನು ಮನಗಂಡು ಬಸವಣ್ಣನವರು ಅನ್ಯಾಯದ ವಿರುದ್ಧ ಸಿಡಿದೆದ್ದು ನಿಂತರು.

"ಲೋಕವಿರೋದಿ ಶರಣನಾರಿಗಂಜುವವನಲ್ಲ" ಕ್ರಾಂತಿಕಾರಿ ಶರಣನು ಲೋಕದ ವಿರೋಧವನ್ನು ತಿಳಿದೂ ತಿಳಿದೂ ಕಟ್ಟಿಕೊಂಡಿದ್ದಾನೆ ಅದರರ್ಥ ತಾನೆ ಕಷ್ಟಗಳನ್ನು ಆರಿಸಿಕೊಂಡಂತೆ. ಅವನು ಆರಿಗೂ ಅಂಜುವವನಲ್ಲ ಮೊದ ಮೊದಲು ಆತ ಸಮಾಜದಲ್ಲಿರುವ ಅಸಮಾನತೆಗಳನ್ನು ಸರಿಪಡಿಸಲು ಬಯಸುತ್ತಾನೆ. ಕೆಳವರ್ಗದ ಜನರ ಅಜ್ಞಾನದೊಡನೆ ಹೋರಾಡಬೇಕು ಇದಕ್ಕಾಗಿ ಅವನು ತನ್ನ ಸುಖ ಶಾಂತಿಗಳನ್ನೆಲ್ಲ ಬಲಿಕೊಟ್ಟು ಅಪಾರ ಕಷ್ಟ ನಷ್ಟ ಮಾನಸಿಕ ಮತ್ತು ದೈಹಿಕ ಹಿಂಸೆಗಳನ್ನು ಅನುಭವಿಸುತ್ತಾನೆ. ಪತಿತರಾದ ಜನರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವುದಕ್ಕಾಗಿ ತನ್ನನ್ನು ತಾನು ಬಲಿಯಾಗಿ ಕೊಟ್ಟುಕೊಳ್ಳುವುದರಲ್ಲಿ ಅತ್ಯಂತ ಸಂತೋಷವಿದೆ ಎಂದುಕೊಳ್ಳುತ್ತಾನೆ. ಬಸವಣ್ಣ ಬಾಲ್ಯದಲ್ಲಿಯೇ ಉಪನಯನವನ್ನು ಪ್ರತಿಭಟಿಸಿ ಬ್ರಾಹ್ಮಣ್ಯವನ್ನು ಅದರ ಅರ್ಥಹೀನ ಸಂಪ್ರದಾಯಗಳನ್ನು, ಜನರನ್ನು ಮೇಲು ಕೀಳುಗಳೆಂದು ವಿಭಾಗಿಸುವ ಅನಿಷ್ಟ ಪದ್ಧತಿಯನ್ನು ಖಂಡಿಸುತ್ತಾನೆ. ಜ್ಞಾನದ ಫಲವಾಗಿ ಉಂಟಾಗಿರುವ ಸಾಮಾಜಿಕ ಅನ್ಯಾಯಗಳನ್ನು ಕಂಡ ಬಸವಣ್ಣನವರ ಮನಸ್ಸು ಹೊಸ ಸಮಾಜವನ್ನು ನಿರ್ಮಿಸುವತ್ತ ಬಯಸುತ್ತದೆ. ಹೊಸ ಸಮಾಜ ನಿರ್ಮಾಣಕ್ಕಾಗಿ ಬಸವಣ್ಣ ಮಾಡಿದ ಮೊದಲ ಕೆಲಸವೆಂದರೆ ತಮ್ಮ ಧರ್ಮ ಮಂದಿರದ ಎಲ್ಲ ಬಾಗಿಲುಗಳನ್ನು ಒಳಗಿನ ಕೊಠಡಿಗಳ ಬಾಗಿಲುಗಳನ್ನು ತೆರೆದದ್ದು. ಅಲ್ಲಿ ಉತ್ತಮ ಹೀನರೆಂಬ ಕುಲಬೇದವಿಲ್ಲ, ಶ್ರೀಮಂತ ಬಡವರೆಂಬ ತಾರತಮ್ಯವಿಲ್ಲ ಎಂದು ಬೋಧಿಸಿ ಧರ್ಮದ ಸಾತ್ವಿಕ ಸ್ವರೂಪವನ್ನು ತಮ್ಮ ವಚನಗಳ ಮುಖಾಂತರ ಸಮಾಜಕ್ಕೆ ತಿಳಿಸುತ್ತಾರೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ,  
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ  
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ,  
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ  
ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ.

ಬಸವಣ್ಣನವರ ಈ ವಚನ ವಿಶ್ವ ಸಮುದಾಯಕ್ಕೆ ನೀಡಿದ ಬಹು ದೊಡ್ಡ ನೀತಿ ಸಂಹಿತೆ. ಶರಣರು ತಮ್ಮ ವಚನಗಳ ಮೂಲಕ ಸ್ವಾಸ್ಥ್ಯ ಸಮಾಜಕ್ಕೆ ಅಗತ್ಯವಾದ ನೀತಿ ಸೂತ್ರಗಳ ಸಂದೇಶ ನೀಡಿದ್ದಾರೆ. ಶರಣರ ವಚನಗಳು ಮಾನವ ಸಮುದಾಯಕ್ಕೆ ನೀಡಿದ ಜೀವನ ಸಂವಿಧಾನವಿದ್ದಂತೆ. ಭಾರತ ಸಂವಿಧಾನವನ್ನು ಅಧ್ಯಯನ ಮಾಡಿದಾಗ ಅದರಲ್ಲಿ ಬಸವಣ್ಣನವರು ಪ್ರತಿಪಾದಿಸಿದ ಸಾಮಾಜಿಕ,

ಆರ್ಥಿಕ, ನೈತಿಕ ಸೂತ್ರಗಳನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. 21ನೇ ಶತಮಾನದ ಸಮಾಜದ ಆರ್ಥಿಕ ಅಗತ್ಯಗಳನ್ನು 9 ಶತಮಾನಗಳ ಹಿಂದೆಯೇ ಕಲ್ಪಿಸಿಕೊಂಡಿದ್ದ ಬಸವಣ್ಣನವರು ಮಹಾನ್ ದಾರ್ಶನಿಕರು. ಬಸವಣ್ಣನವರು ಪ್ರತಿಪಾದಿಸಿದ ಶರಣ ಸಂಸ್ಕೃತಿ ಇಂದಿಗೂ ಇಡೀ ವಿಶ್ವಕ್ಕೆ ನೀಡಿದ ಆದರ್ಶ ಮಾನವ ಸಂಸ್ಕೃತಿಯಾಗಿವೆ. ಅವರ ವಚನಗಳು ಇಂದಿಗೂ ಕೂಡಾ ಸಾರ್ವಕಾಲಿಕ ಪ್ರಸ್ತುತತೆಯನ್ನು ಹೊಂದಿವೆ.

ಬಸವಣ್ಣನವರು ಕಟ್ಟಬಯಸಿದ ಸಮಾಜ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಮಾನತೆಯನ್ನು ಸಾರುವಂತಹ ಆದರ್ಶ ಸಮಾಜ. ವರ್ಣರಹಿತ, ವರ್ಗರಹಿತ, ಜಾತಿರಹಿತ, ಸುಂದರ ಸಮಾಜದ ಕಲ್ಪನೆ 12ನೇ ಶತಮಾನದಲ್ಲಿಯೇ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ಬಂದಿದ್ದು ಬಸವಣ್ಣನವರ ದೂರದೃಷ್ಟಿಯ ಪ್ರತಿಬಿಂಬ. ಈ ವಚನ ಸಾಹಿತ್ಯ ವಿಶ್ವದ ಸಾಹಿತ್ಯದ ಸಾಲಿನಲ್ಲಿ ಸಾರ್ವಕಾಲಿಕವಾಗಿ ಅತ್ಯಂತ ಗಟ್ಟಿಯಾಗಿ ನಿಲ್ಲುವಂತಹ ಪ್ರಜಾಸಾಹಿತ್ಯ, ಪ್ರಗತಿಶೀಲ ಸಾಹಿತ್ಯ ಎಲ್ಲಕ್ಕಿಂತ ಮಿಗಿಲಾಗಿ ಮಾನವ ಸಮುದಾಯಕ್ಕೆ ದಿಕ್ಕು ತಪ್ಪಿದ ಜಗತ್ತಿಗೆ ಜೀವನ ದರ್ಶನ ಮಾಡಿದ ಕ್ರಾಂತಿಕಾರಕ ಸಾಹಿತ್ಯ. ಈ ನಿಟ್ಟಿನಲ್ಲಿ ಬಸವಣ್ಣನವರು ಕಂಡ ವರ್ಣರಹಿತ, ಜಾತಿರಹಿತ, ಧಾರ್ಮಿಕ ಸಮಾನತೆಯ ಸಮಾಜ ನಮ್ಮೆಲ್ಲರ ಇಂದಿನ ಆಶಯವಾಗಬೇಕಿದೆ. ಆ ನಿಟ್ಟಿನಲ್ಲಿ ಇಂದಿನ ಸಮಾಜ ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗಿದೆ.

ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬರು ;  
ಕಂಗಳಿಚ್ಛೆಗೆ ಪರವಧುವ ನೆರೆವರು ;  
ಲಿಂಗಲಾಂಛನಧಾರಿಯಾದಲ್ಲಿ ಫಲವೇನು?

ಎಂದು ಬಸವಣ್ಣ ವರ್ಣ ವ್ಯವಸ್ಥೆ ಕುರಿತು ವಿಡಂಬನಾತ್ಮಕವಾಗಿ ಎಚ್ಚರಿಸುತ್ತಾರೆ. ಹೀಗೆ ವೀರಶೈವ ಧರ್ಮಕ್ಕೆ ಸೇರಿ ಭವಿತನವನ್ನು ಕಳೆದುಕೊಂಡು ಭಕ್ತರಾದವರು ತಮ್ಮ ತಮ್ಮಲ್ಲಿ ಜಾತಿವರ್ಣಗಳನ್ನು ಹುಡುಕಕೂಡದು ಎಂದು ನಿಯಮಿಸಿದರು. ಏಕೆಂದರೆ ಒಮ್ಮೆ ವೀರಶೈವರಾದ ಮೇಲೆ ಅವರೆಲ್ಲರೂ ಸಮಾನರು. ಅವರು ಭವಿಗಳಾದ ನೆಂಟರೊಡನೆ ಸಂಬಂಧವನ್ನು ಬೆಳೆಸದೇ ಭಕ್ತರೊಡನೆ ಮಾತ್ರ ಸಂಬಂಧವನ್ನು ಬೆಳೆಸಬೇಕೆಂದು ನಿಯಮಿಸಿದರು. ಭವಿಗಳಾಗಿದ್ದವರು ಭಕ್ತರಾದ ಮೇಲೂ ಸಹಭೋಜನ ಮುಂತಾದವುಗಳಲ್ಲಿ ಮಾತ್ರ ಕುಲವನ್ನು ನೋಡದೆ ವೈವಾಹಿಕ ವಿಷಯಗಳಲ್ಲಿ ಮಾತ್ರ ಬೇಧವನ್ನು ಮಾಡುತ್ತಿರುವುದನ್ನು ಕಂಡು

ಉಂಬುವಲ್ಲಿ ಉಡುವಲ್ಲಿ ಕ್ರೀಯಳಿಯಿತೆಂಬರು,  
ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು  
ಎಂತಯ್ಯಾ, ಅವರ ಭಕ್ತನೆಂಬೆ?  
ಎಂತಯ್ಯಾ, ಅವರ ಯುಕ್ತರೆಂಬೆ?  
ಕೂಡಲಸಂಗಮದೇವಾ, ಕೇಳಯ್ಯಾ,

ಹೊಲತಿ ಶುದ್ಧನೀರ ಮಿಂದಂತಾಯಿತ್ತಯ್ಯಾ!

ಜಾತಿ ಬೇಧವನ್ನು ಸಂಪೂರ್ಣ ಅಳಿಸಲು ಹೋದ ಧರ್ಮದಲ್ಲೇ ಹೊಸ ಬೇಧಗಳು ಹಿಂಬಾಗಿಲಿನಿಂದ ಬರುವುದಾದರೆ ಅವುಗಳನ್ನು ಮತ್ತೆ ಅಳಿಸುವ ಅಗತ್ಯವಾದರೂ ಏನಿದೆ? ಆದ್ದರಿಂದ ಬಸವಣ್ಣನವರು ಈ ಜಾತಿ ವ್ಯವಸ್ಥೆಯ ಪಿಡುಗನ್ನು ಸಮಾಜದಿಂದ ಕಿತ್ತೊಗೆಯಲು ದೊಡ್ಡಮಟ್ಟದಲ್ಲಿ ಮಾತ್ರವಲ್ಲದೆ ಸಣ್ಣ ಸಣ್ಣ ವಿಚಾರಗಳಲ್ಲಿಯೂ ಅಸಮಾನತೆಯನ್ನು ಅಳಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ಹುಟ್ಟಿನಿಂದ ಬ್ರಾಹ್ಮಣನೋ, ದಲಿತನೋ ಶಿವಭಕ್ತರಾದ ಮೇಲೆ ಅವರೆಲ್ಲ ವಿವಾಹ ಸಂಬಂಧ ಬೆಳೆಸಲು ಬೋಧಿಸಿದರು. ಅರ್ಥವಿಲ್ಲದ ಆಚಾರಗಳನ್ನು ಖಂಡಿಸಿ ಅವುಗಳಿಗೆ ಬದಲಾಗಿ ಅರ್ಥಪೂರ್ಣ ಆಚಾರಗಳನ್ನು ಬೋಧಿಸಿದರು. ಬಸವಣ್ಣನವರಿಗೆ ಕೆಳವರ್ಗದವರೆಂದರೆ ಪಾರವಾದ ಕರುಣೆ ಮತ್ತು ವಾತ್ಸಲ್ಯ. ಅವರನ್ನು ಊರ ಹೊರಗಿಟ್ಟು "ಹೊಲೆಯ" ರೆಂದು ಕರೆದು ನಿಕೃಷ್ಟವಾಗಿ ಕಾಣುವುದು ಅವರಿಗೆ ಸ್ವಲ್ಪವೂ ಹಿಡಿಸಲಿಲ್ಲ. ಉತ್ತಮ ಕುಲದಲ್ಲಿ ಹುಟ್ಟಿದರೂ ಚಂಡಾಲರಾಗಿ ಬಾಳುತ್ತಿರುವವರನ್ನು ಬಸವಣ್ಣ ಕಣ್ಣಾರೆ ಕಂಡಿದ್ದರು, ಹಾಗೆಯೇ ಹೀನ ಕುಲದಲ್ಲಿ ಹುಟ್ಟಿದ್ದರೂ ಸ್ವಭಾತಃ ಶ್ರೇಷ್ಠರಾಗಿರುವವರನ್ನು ಗುರುತಿಸಿದ್ದರು. ಇವೆರಡೂ ಭಿನ್ನಾಭಿಪ್ರಾಯಗಳನ್ನು ಮನಗಂಡ ಬಸವಣ್ಣನವರು ವೃತ್ತಿ ಕುಲಗಳ ಆಧಾರದ ಮೇಲೆ ಮನುಷ್ಯನ ಮೇಲುಕೀಳುಗಳನ್ನು ಎಣಿಸುವುದು ಪರಮ ಅನ್ಯಾಯವೆಂದು ಅವರಿಗೆ ಕಂಡಿತು. ಬೇರೆ ಬೇರೆ ವೃತ್ತಿಗಳನ್ನವಲಂಭಿಸಿರುವುದು ಅವರವರ ಜೀವನೋಪಾಯಕ್ಕೆ ಮಾತ್ರ. ವೇದಗಳನ್ನು ಅಧ್ಯಯನ ಮಾಡಿದ್ದರಿಂದ ಬ್ರಾಹ್ಮಣ, ಬಟ್ಟೆಯನ್ನು ನೇಯ್ದದ್ದರಿಂದ ನೇಕಾರ, ಕಬ್ಬಿಣ ಕಾಸಿದ್ದರಿಂದ ಕಮ್ಮಾರ, ಹರಿಗೋಲು ಬೀಸಿದ್ದರಿಂದ ಅಂಬಿಗ, ಪಾದರಕ್ಷೆಗಳನ್ನು ತಯಾರಿಸಿದ್ದರಿಂದ ಹರಿಜನ, ಕ್ಷೌರಿಕ ಮಾಡಿದ್ದರಿಂದ ಹಡಪದ, ಬಟ್ಟೆ ತೊಳೆಯುವುದರಿಂದ ಮಡಿವಾಳ ಹೀಗೆ ಇತ್ಯಾದಿಯವರು ಬೇರೆ ಬೇರೆ ವೃತ್ತಿಯನ್ನವಲಂಭಿಸಿದ್ದಾರೆ. ಇವರೆಲ್ಲರೂ ಮನುಷ್ಯರೆ ಇವರಲ್ಲಿ ಮೇಲೂ ಕೀಳುಗಳನ್ನು ಹುಡುಕುವುದು ಮೂರ್ಖತನವಾಗುತ್ತದೆ. ಇದನ್ನು ಬಸವಣ್ಣನವರು ಬರೀ ಬೋಧನೆಯ ಮಾತಾಗಿ ಉಪದೇಶ ಮಾಡಲಿಲ್ಲ ಅವರಲ್ಲಿ ಆಗಾಗ ತಾವು ಹುಟ್ಟಿನಿಂದ ಬ್ರಾಹ್ಮಣ ಶ್ರೇಷ್ಠ ಎಂಬ ಅಭಿಮಾನದ ಭಾವನೆ ಅಂಕುರಿಸುತ್ತಿದ್ದಿತೆಂಬುದಕ್ಕೆ ಅದನ್ನು ಆ ಕ್ಷಣವೇ ಚಿವುಟಿಹಾಕಿ ತಮ್ಮನ್ನು ತಾವು ಕೆಳಗಿನವರಿಗಿಂತ ಕೆಳಗಿನವರು ಎಂದು ಭಾವಿಸಿಕೊಂಡು ತಮ್ಮ ಮನಸ್ಸಿನ ಸಮತೆಯನ್ನು ಕಾಪಾಡಿಕೊಳ್ಳುತ್ತಿದ್ದರೆಂಬುದಕ್ಕೆ ಹಲವು ವಚನಗಳು ಸಾಕ್ಷಿಯಾಗಿವೆ.

ಮಾದಾರ ಚನ್ನಯ್ಯ ಡೋಹರ ಕಕ್ಕಯ್ಯರಿಬ್ಬರು ಹೊಲೆಯರು ಅವರಿಬ್ಬರನ್ನು ಅವರು ಬಹುವಾಗಿ ಕೊಂಡಾಡಿದ್ದಾರೆ. ಅವರಿಬ್ಬರ ಮನೆಯ ದಾಸ ದಾಸಿಯರಿಗೆ ತಾವು ಹುಟ್ಟಿದವರು ಎಂದು ಹೇಳಿಕೊಳ್ಳುವಷ್ಟು ದೂರ ಹೋಗಿದ್ದಾರೆ. ಹೊಲೆಯ ಮಾದಿಗನು ಭಕ್ತನಾದರೆ ಅವನ ಮನೆಯ ನಾಯಿಗೆ ಉತ್ಸವದಲ್ಲಿ ಪಂಚಮಹಾವಾದ್ಯಗಳನ್ನು ಬಾರಿಸಿ ಮೆರೆಸುತ್ತೇನೆ ಎನ್ನುವಷ್ಟು ದೂರಹೋಗಿ ಜಾತಿ

ವ್ಯವಸ್ಥೆಯನ್ನು ಸಮಾಜದಿಂದ ಕಿತ್ತೊಗೆಲು ಪ್ರಯತ್ನ ಮಾಡಿದ್ದಾರೆ. ತಮ್ಮ ಮನಸ್ಸಿನಿಂದ ಸಂಪೂರ್ಣವಾಗಿ ಶ್ರೇಷ್ಠ–ಕನಿಷ್ಠ, ಸ್ಪರ್ಶ–ಅಸ್ಪರ್ಶ ಭಾವನೆಗಳನ್ನು ತೆಗೆದುಹಾಕಿದ್ದ ಬಸವಣ್ಣನವರು ಸಮಾಜದಲ್ಲಿ ಸರ್ವರನ್ನೂ ಸಮಾನವಾಗಿ ಕಾಣಬಲ್ಲವರಾಗಿದ್ದರು. ಬಸವಣ್ಣನವರ ಬಾಳಿನಲ್ಲಿ ನಡೆದ ಒಂದು ಸತ್ಯ ಘಟನೆಯನ್ನು ಸ್ಮರಿಸುವುದು ಬಸವಣ್ಣ ಸಮಾನತೆಯ ಹರಿಕಾರನಾಗಿದ್ದನೆಂಬುದಕ್ಕೆ ಸಾಕ್ಷಿಯಾಗಿದೆ. ಕಲ್ಯಾಣ ಪಟ್ಟಣದ ಹೊರಗೆ ವಾಸಿಸುತ್ತಿದ್ದ ಅಸ್ಪೃಶ್ಯರ ಕೇರಿಯನ್ನು "ಹಿರಿಯ ಮಾಹೇಶ್ವರರ ಕೇರಿ" ಎಂದು ಭಾವಿಸಿದ್ದರು. ಆ ಕೇರಿಯಲ್ಲಿ ಒಂದು ದಿನ ಬರುತ್ತಿರುವಾಗ ಒಂದು ಮನೆಯಿಂದ ಶಿವಭಕ್ತರ ನಾಮಸ್ಮರಣೆ ಕೇಳಿಬಂದಿತು. ಆ ಮನೆ ಸಂಬೋಳಿ ನಾಗಿದೇವನೆಂಬ ದಲಿತ ಶಿವಭಕ್ತನ ಮನೆ. ಬಸವಣ್ಣನವರು ಅತ್ಯಂತ ಭಕ್ತಿಯಿಂದ ಆ ಸಂಬೋಳಿ ನಾಗಿದೇವನ ಮನೆ ಪ್ರವೇಶಿಸಿ ಆ ಶಿವಭಕ್ತರೊಡನೆ ಪ್ರಸಾದವನ್ನು ಸ್ವೀಕರಿಸಿದರು. ಇತ್ತ ಅದೇ ಸಮಯವನ್ನು ಕಾಯುತ್ತಿದ್ದ ಸಂಪ್ರದಾಯವಾದಿಗಳು ಬಿಜ್ಜಳನ ಬಳಿಗೆ ಓಡಿ ಬಂದು ತಮ್ಮ ವರ್ಣಾಶ್ರಮ ಧರ್ಮವು ನಾಶವಾಯಿತೆಂದು ಜಾತಿ ಸಂಕರವಾಯಿತೆಂದು ಗೂಳಿಟ್ಟರು. ಜಾತಿ ಸಂಕರವಾದ ಬಳಿಕ ಕುಲವನರಸುವರೇ? ಎಂದು ಪ್ರಶ್ನಿಸಿ ಕಾಯಕ ಜೀವಿಗಳ ಕೇಂದ್ರಿತ ಶರಣ ಸಂಕುಲವನ್ನು ಸೃಷ್ಟಿಸಿದರು. ವಿವಿಧ ಕಾಯಕಗಳ ಶೂದ್ರರಿಗೆ ಮಹಿಳೆಯರಿಗೆ ಮತ್ತು ಪಂಚಮರಿಗೆ ಮೊದಲ ಬಾರಿಗೆ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಮಾಡಿದರು. ಬಸವಣ್ಣನವರ ಜಾತಿ ಸಮಾನತೆಯಿಂದ ಶಿಕ್ಷಣ ಪಡೆದ ಇವರೆಲ್ಲರೂ ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಆ ಅನುಭವ ಮಂಟಪ ಇಂದಿನ ಪಾರ್ಲಿಮೆಂಟ್ ಆಗಿ 12 ನೇ ಶತಮಾನದಲ್ಲಿ ಜಗತ್ತಿಗೆ ವಿಶ್ವಮಾನವ ಸಂದೇಶ ನೀಡಿದ್ದನ್ನು ಕಾಣಬಹುದು.

ಭಾರತದಲ್ಲಿ ವಿವಿಧ ಜಾತಿಗಳ ಕಾಯಕ ಜೀವಿಗಳು ಮೊದಲ ಬಾರಿಗೆ ಜಾತಿಯನ್ನು ಮೀರಿ ಒಂದು ವರ್ಗವಾಗಿದ್ದು ಶರಣ ಸಂಕುಲದಲ್ಲಿ ಎಂಬುದು ಹೆಮ್ಮೆಯ ವಿಚಾರವಾಗಿದೆ. ಅವರೆಲ್ಲರೂ ತಾವು ಮಾಡುವ ಕಾಯಕದ ಹೆಸರನ್ನು ಅಭಿಮಾನದಿಂದ ಉಳಿಸಿಕೊಂಡರು. ಆದರೆ ಕಾಯಕಗಳ ಒಳಗಿದ್ದ ಜಾತಿ ವಿಷವನ್ನು ಹೊರಹಾಕಿದರು. ಹೀಗೆ ಶರಣ ಮಹಾಶರಣರಾದ ಸಮಗಾರ, ಮಾದಾರ, ಮೇದಾರ, ಡೋಹಾರ, ಅಂಬಿಗ, ಹಡಪದ, ಮಡಿವಾಳ ಹೀಗೆ ಮುಂತಾದ ಪದಗಳು ಜಾತಿ ಸೂತಕವನ್ನು ಕಳೆದುಕೊಂಡು ಕಾಯಕ ಸೂಚಕಗಳಾಗಿ ಮೈದಳೆದು ನಿಂತಿರುವುದು ಬಸವಣ್ಣನ ಸಾಮಾಜಿಕ ಜಾತಿ ಪರಿವರ್ತನೆಗೆ ಸಾಕ್ಷಿಯಾಗಿ ನಿಂತಿದೆ.

12ನೇ ಶತಮಾನದ ಅಣ್ಣ ಬಸವಣ್ಣ ತಮ್ಮ ಕಾಲವನ್ನು ಮೀರಿ 21ನೇ ಶತಮಾನದ ವಿಚಾರಗಳನ್ನು ಹೊಂದಿದ್ದು ಬಸವಣ್ಣನವರ ದೂರದೃಷ್ಟಿಗೆ ಸಾಕ್ಷಿಯಾಗಿದೆ. ಕರ್ನಾಟಕದ ಇತಿಹಾಸದಲ್ಲಿ 12ನೇ ಶತಮಾನ ಒಂದು ವಿಶಿಷ್ಟ ಕಾಲಘಟ್ಟ. ಜಡ್ಡು ಹಿಡಿದಿದ್ದ ಸಮಾಜಕ್ಕೆ ವೈಚಾರಿಕ ಸ್ಪರ್ಶ ನೀಡುವ ಮೂಲಕ ಒಂದು ಹೊಸ ಸಮಾಜದ ಸೃಷ್ಟಿಯ ಕನಸನ್ನು ಕಂಡಂತಹ ಶರಣರು ಬಸವಣ್ಣನವರ ನೇತೃತ್ವದಲ್ಲಿ ನಡೆಸಿದಂತಹ

ಕ್ರಾಂತಿ ಅಪೂರ್ವವಾದುದು. ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸಮಾಜ ಸುಧಾರಣೆಯ ಪ್ರಯತ್ನ ಒಂದು ಸಾಮಾಜಿಕ ಚಳುವಳಿಯಾಗಿ ರೂಪಗೊಂಡು ಸಾಮಾನ್ಯ ಬದುಕಿನ ಎಲ್ಲ ಸ್ಥರಗಳು ಆ ಚಳುವಳಿಯ ಒಂದು ಭಾಗವಾಗಿದ್ದು ಶರಣರ ಪೂರ್ಣ ದೃಷ್ಟಿಯ ಸಂಕೇತ. ಜಾತ್ಯಾತೀತ ಸಮಾಜ ಕಲ್ಪನೆ ಬಸವಣ್ಣನವರ ಕಣ್ಣಿಗೆ ಮೊದಲು ಬಿದ್ದದ್ದು ಅಂದಿನ ಸಮಾಜದಲ್ಲಿನ ಜಾತಿಯ ವಿಷಮತೆ. ಜಾತಿಯ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ, ದಲಿತರ ಮೇಲೆ ನಡೆಯುತ್ತಿದ್ದ ಕ್ರೌರ್ಯ ಬಸವಣ್ಣನವರ ಮನಸ್ಸನ್ನು ತುಂಬಾ ಗಾಸಿಗೊಳಿಸಿತು. ಇದರಿಂದಾಗಿ ಬಸವಾದಿ ಶರಣರು ಇಡೀ ಜಾತಿ ವ್ಯವಸ್ಥೆ ವಿರುದ್ಧ ಎದೆ ತಟ್ಟಿ ನಿಂತರು. ಕೊಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ, ಕುಲ ಯಾವುದೋ ಆವಂದಿರ ಕುಲ ಯಾವುದೋ ಎಂದು ಪ್ರಶ್ನಿಸುವ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವನೇ ಶ್ರೇಷ್ಠ ಕುಲಜನು ಎಂಬ ವ್ಯಾಖ್ಯಾನ ನೀಡಿದ ಹಿರಿಮೆ ಮಹಾ ಮಾನವತಾವಾದಿ ಬಸವಣ್ಣನವರಿಗೆ ಸಲ್ಲುತ್ತದೆ. ಜಾತ್ಯಾತೀತ ಸಮಾಜದ ಪರಿಕಲ್ಪನೆ ಬಸವಣ್ಣನವರ ಬಹುದೊಡ್ಡ ಕೊಡುಗೆಯಾಗಿದೆ.

"ಉಳ್ಳವರು ಶಿವಾಲಯ ಮಾಡಿಹರು, ನಾನೇನು ಮಾಡಲಿ ಬಡವನಯ್ಯ" ಎಂದು ಉಳ್ಳವರು ಮತ್ತು ಬಡವರ ಬಗ್ಗೆ ಅತ್ಯಂತ ಕಾಳಜಿಯ ಅರಿವನ್ನು ಮೂಡಿಸಿ ಸಾಮಾಜಿಕ ವೈರುಧ್ಯಗಳು ಸ್ಪಷ್ಟವಾಗಿ ಗೋಚರಿಸುವಂತೆ ಮಾಡಿದರು. ಸಮಾಜದಲ್ಲಿ ಸಮಾನತೆಯ ನ್ಯಾಯ ಒದಗಬೇಕಾದರೆ ಸಮಾಜದಲ್ಲಿ ವೈರುಧ್ಯಗಳನ್ನು ಗುರುತಿಸಬೇಕಾಗುತ್ತದೆ. ಬಸವಣ್ಣ ಈ ಸಾಮಾಜಿಕ ವೈರುಧ್ಯಗಳನ್ನು ಗುರುತಿಸಿ ಇಡೀ ವಿಶ್ವಕ್ಕೆ ಮೊದಲು ಬಾರಿ ತೋರಿಸಿಕೊಟ್ಟರು. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತ ಕಟ್ಟ ಕಡೆಯ ಮನುಷ್ಯರನ್ನು ಮೊಟ್ಟಮೊದಲು ಗುರುತಿಸಿರುವುದು ಬಸವಣ್ಣನವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯಾಗಿದೆ. ಇಡೀ ವಿಶ್ವದಲ್ಲಿ ಬಹಳ ಮಹತ್ವದ ವಿಚಾರವಾಗಿ ಪರಿಗಣಿಸಲ್ಪಟ್ಟಿದೆ. ಜಾತಿ, ಮತ, ಲಿಂಗಗಳ ಬೇದಗಳನ್ನು ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣವಾದರು. ಬಸವಣ್ಣನವರನ್ನು ಈ ಕಾರಣದಿಂದಾಗಿಯೇ ಜಗಜ್ಯೋತಿ ಬಸವೇಶ್ವರರು, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಭಂಡಾರಿ ಬಸವಣ್ಣ, ಮಹಾ ಮಾನವತಾವಾದಿ ಬಸವಣ್ಣ ಎಂದು ಕರೆಯಲಾಗುತ್ತದೆ. ಮಾನವೀಯತೇ, ಕಾಯಕನಿಷ್ಟೇಯು ಇವು ಧರ್ಮದ ಬುನಾದಿಯಾಗಬೇಕು ಎಂದು ಬಲವಾಗಿ ನಂಬಿದವರು ಬಸವಣ್ಣ. ತಮ್ಮ ವಚನಗಳ ಮೂಲಕ 'ಕಾಯಕವೇ ಕೈಲಾಸ' 'ಧಯವೇ ಧರ್ಮದ ಮೂಲವಯ್ಯ' 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂದು ಸಾರುವ ಮೂಲಕ ತಮ್ಮ ಮಾನವತಾವಾದಕ್ಕೆ ಸಾಹಿತ್ಯಿಕ ಸ್ಪರ್ಶ ನೀಡಿದರು.

ಬಸವಣ್ಣನವರು ಮನುಕುಲಕ್ಕೆ ಉಪಕಾರವಾಗುವಂತಹ ವೈಚಾರಿಕ ಪ್ರಜ್ಞೆಯಿಂದ ಸಮಾಜವು ತನ್ನ ಘಟಕವಾದ ವ್ಯಕ್ತಿಯ ಉನ್ನತಿಯಿಂದಲೇ ಶ್ರೇಷ್ಠವಾಗುವುದು. ಆದ್ದರಿಂದ ಬಸವಣ್ಣನವರು ವ್ಯಕ್ತಿ ವ್ಯಕ್ತಿಗಳಲ್ಲಿ ಬದಲಾವಣೆ ತರಲು ಬಯಸಿದರು. ನೈತಿಕವಾಗಿ, ಧಾರ್ಮಿಕವಾಗಿ ಉತ್ತಮರಾಗುವಂತೆ ಮಾಡಲು

ಪ್ರಯತ್ನಿಸಿದರು. ವ್ಯಕ್ತಿಯು ಚಾರಿತ್ರ್ಯದಿಂದ ಒಳ್ಳೆಯವನಾದರೆ ಮುಂದೆ ಅದರಿಂದ ಸಮಾಜದ ಒಳಿತು ಸಾಧ್ಯವೆಂದು ಬಲವಾಗಿ ನಂಬಿದ್ದರು. ಮಾನವರಲ್ಲಿ ಕೆಲವು ಮುಖ್ಯವಾದ ಜೀವನ ಮೌಲ್ಯಗಳನ್ನು ರೂಪಿಸಿದರೆ ಆ ಮೌಲ್ಯಗಳ ಬಗ್ಗೆ ಗೌರವ, ಪ್ರೀತಿ ಉಂಟಾದರೆ ಆ ವ್ಯಕ್ತಿ ಮಾನವೀಯ ಗುಣಗಳನ್ನು ಬೆಳೆಸಿಕೊಂಡು ಬೆಳೆಯುತ್ತಾನೆ. ಆದ್ದರಿಂದ ಸ್ವತಃ ಬಸವಣ್ಣನವರೆ ನ್ಯಾಯ, ನೀತಿ, ಸದಾಚಾರ, ಸತ್ಯ ಮುಂತಾದ ಮೌಲ್ಯಗಳನ್ನು ಆಚರಿಸಿ ಆಧರಿಸಿ ಸಮಾಜಕ್ಕೆ ತೋರಿಸಿಕೊಟ್ಟರು. 12ನೇ ಶತಮಾನದಲ್ಲಿಯೂ ಸಹ ಬಸವಣ್ಣನವರು ಸಮಾಜ ಬದಲಾವಣೆಯಾಗದ ಸ್ಥಿತಿಯನ್ನು ಮನಗಂಡು ಲೋಕವನ್ನು ಎಲ್ಲರೂ ಒಂದೇ ರೀತಿ ಪ್ರವೇಶಿಸುತ್ತಾರೆ ಆದರೆ ಅವರೆಲ್ಲರಲ್ಲಿ ಬೇರೆ ಬೇರೆ ಭಾವನೆ, ವರ್ಣಬೇಧ, ವರ್ಗಬೇಧ ಏಕೆ ಮೂಡುತ್ತದೆ? ಕಾಯಕಕ್ಕೆ ಏಕೆ ಮಹತ್ವವಿಲ್ಲ? ಬರೀ ಕಂದಾಚಾರ, ಮೂಡನಂಬಿಕೆ, ಡಾಂಭಿಕತನಗಳು ಸಮಾಜದಲ್ಲಿ ಏಕೆ ಬೆಳೆಯುತ್ತವೆ ಎಂದು ವಿಚಾರ ಮಾಡಿ ಸಮಗ್ರವಾಗಿ ಸಮಾಜವನ್ನು ಪರಿವರ್ತನೆ ಮಾಡುವ ಕುರಿತು ಯೋಚಿಸಿದರು. ಸಾಮಾಜಿಕ ಪ್ರಜ್ಞೆಯನ್ನು ಪಡೆದ ಬಸವಣ್ಣನವರು ಸಮಾಜದ ಜನರಿಗೆ ಯಾವುದು ಸರಿ, ಯಾವುದು ತಪ್ಪು ಆಚರಣೆ ಎಂದು ತೋರಿಸಲು ತಮ್ಮನ್ನೇ ಪ್ರಾಯೋಗಿಕ ವಿಮರ್ಶೆಗೊಳಪಡಿಸಿಕೊಂಡರು. ಅದಕ್ಕಾಗಿ ಅವರು ಅಂತರ್ಜಾತಿ ವಿವಾಹಗಳನ್ನು ನಡೆಸಿದರು. ಸಮಾಜದಲ್ಲಿರುವ ಬೇಧ ಭಾವವನ್ನು ದೂರಮಾಡಿ ಸಮಾಜದಲ್ಲಿ ಸಮಾನತೆಯನ್ನು ತರಲು ಬದುಕಿ ತೋರಿಸಿದರು. ಇದಕ್ಕೆ ಉದಾಹರಣೆಯೆಂದರೆ ಉಪನಯನವಾದ ನಂತರ ಯಜ್ಞ, ಯಾಗ ಮುಂತಾದ ಕಾರ್ಯಗಳನ್ನು ಮಾಡಬೇಕಾದ್ದರಿಂದ ಸಂಪ್ರದಾಯವನ್ನು ವಿರೋಧಿಸಿ ತಮ್ಮ ಧರ್ಮವನ್ನೇ ಬದಲಿಸಿಕೊಂಡರು. ಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದ ಶೋಷಿತರನ್ನು, ಸ್ತ್ರೀಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಿದರು. ಅದಕ್ಕಾಗಿ ಅವರ ನೇತೃತ್ವದಲ್ಲಿ ನಡೆದ ಸಮಗ್ರ ಕ್ರಾಂತಿಯ ಸ್ವರೂಪವನ್ನು ಅರ್ಥೈಸಬೇಕಾದರೆ ಅವರು ಹಾಗೂ ಅವರ ಸಮಕಾಲೀನ ಶರಣರು ರಚಿಸಿದ ವಚನ ಸಾಹಿತ್ಯಕ್ಕೆ ನಾವು ಮೊರೆಹೋಗಬೇಕಾಗುತ್ತದೆ. ಏಕೆಂದರೆ ಬಸವಣ್ಣನವರ ನೇತೃತ್ವದಲ್ಲಿ ಶರಣರು ನಡೆಸಿದ ಕ್ರಾಂತಿಗೆ ವಚನ ಸಾಹಿತ್ಯವೇ ನೀತಿ ಸಂಹಿತೆ. ಅದೇ ಅವರ ಹೋರಾಟದ ಸಂವಿಧಾನ. ವಚನ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಹೊಸರೂಪ ತಂದುಕೊಟ್ಟಂತಹ ಅನುಭವ ಸಾಹಿತ್ಯ. ಆ ಸಾಹಿತ್ಯದಿಂದಲೇ ಸಮಾಜದಲ್ಲಿ ವರ್ಣಬೇಧ, ವರ್ಗಬೇಧ, ಜಾತಿ ವ್ಯವಸ್ಥೆಯನ್ನು ಬೇರು ಸಹಿತ ಕಿತ್ತೊಗೆಯಲು ಬಂಡಾಯವೆದ್ದರು. ಈ ನೆಲೆಯಲ್ಲಿ ವಚನ ಸಾಹಿತ್ಯದ ಮೂಲ ಆಶಯ ವ್ಯಕ್ತಿಯ ಕಲ್ಯಾಣದ ಜೊತೆಗೆ ಲೋಕಕಲ್ಯಾಣದ ಸಾಧನೆಯಾಗಬೇಕೆಂಬುದೇ ಅವರ ಆಶಯವಾಗಿತ್ತು. ಲಿಂಗಬೇಧವಿಲ್ಲದೆ, ವರ್ಣಬೇಧವಿಲ್ಲದೆ ಎಲ್ಲ ಶರಣರು ಒಂದೆಡೆ ಸೇರಿ ಕಟ್ಟಿಕೊಂಡ ಮಂಟಪವೇ ಅನುಭವ ಮಂಟಪವಾಯಿತು ಹಾಗೂ ವಚನ ಸಾಹಿತ್ಯದ ಉಗಮ ಸ್ಥಾನವೂ ಆಯಿತು. ಆ ಅನುಭವ

ಮಂಟಪದಲ್ಲಿ ಎಲ್ಲರೂ ಸೇರಿ ತಮ್ಮ ತಮ್ಮ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಮತ್ತು ಪರಸ್ಪರ ಹಂಚಿಕೊಳ್ಳುವ ವೈಚಾರಿಕ ದಾಸೋಹದ ಕೇಂದ್ರವಾಯಿತು ಅನುಭವ ಮಂಟಪ.

ದಯೆಯೆ ಧರ್ಮದ ಮೂಲವಯ್ಯ
ದಯೆಯಿಲ್ಲದ ಧರ್ಮ ಯಾವುದಯ್ಯ
ದಯೆ ಬೇಕು ಸಕಲ ಪ್ರಾಣಿಗಳೆಲ್ಲರಲಿ
ದಯೆಯೆ ಧರ್ಮದ ಮೂಲವಯ್ಯ
ಕೂಡಲ ಸಂಗಮದೇವನಂತಲ್ಲದೊಲ್ಲನಯ್ಯಾ.

ಎಂಬ ಬಸವಣ್ಣನವರ ವಾಣಿಯಂತೆ ಶರಣ ಧರ್ಮದ ಮೂಲ ಆಧಾರವೇ ದಯೆ. ಶರಣ ಧರ್ಮದ ಮೂಲ ತಳಹದಿಯೇ ದಯೆ. ಪರಸ್ಪರ ಪ್ರೀತಿ ಪ್ರೇಮ ದಯೆಯಂತಹ ಮಾನವೀಯ ಗುಣಗಳಿಂದಾಗಿ ಶರಣರು ಪ್ರತಿಪಾದಿಸಿದ ಧರ್ಮ ಮಾನವ ಧರ್ಮವಾಯಿತು. ಶರಣರು ಕೇವಲ ಮಾನವರಲ್ಲಿ ಮಾತ್ರ ದಯೆ ತೋರಿದವರಲ್ಲ ಭೂಮಂಡಲದ ಇಡೀ ಜೀವರಾಶಿಗೆ ದಯೆಯ ಮಳೆಯನ್ನೇ ಸುರಿಸಿದವರು. ಶರಣರು ಎಂದೂ ಸಹ ಮೂಡನಂಬಿಕೆಗಳನ್ನು ಧರ್ಮದ ಹೆಸರಿನಲ್ಲಿ ಪ್ರೋತ್ಸಾಹಿಸಿದವರಲ್ಲ. ಬದಲಿಗೆ ಮೂಡನಂಬಿಕೆಗಳ ವಿರುದ್ದ ಸಮರ ಸಾರಿದವರು. ಅವರು ಯಜ್ಞ ಯಾಗಾದಿಗಳನ್ನು ಖಂಡಿಸಿದರು ವಾರ, ತಿಥಿ, ನಕ್ಷತ್ರ, ಯೋಗ, ಕರ್ಣ ಇವುಗಳ ಹೆಸರಿನಲ್ಲಿ ಶೋಷಿಸುವವರ ವಿರುದ್ಧ ಸಿಡಿದೆದ್ದು ನಿಂತರು. ಅಷ್ಟೇ ಅಲ್ಲದೆ ವೈಚಾರಿಕ ಚಿಂತನೆಯನ್ನು ಅಂತಹ ಮೂಡರಿಗೆ ಬೋಧಿಸಿದರು. ಕಲ್ಯಾಣ ಸಮಾಜ ನಿರ್ಮಾಣ ಶರಣ ಸಂಸ್ಕೃತಿಯ ಮೂಲ ಆಶಯವಾಗಿತ್ತು. ಸಮಾಜದಲ್ಲಿ ಸಮಾನತೆಯೊಂದಿದ್ದರೆ ಸುಂದರ ಕಲ್ಯಾಣ ರಾಜ್ಯ ನಿರ್ಮಾಣ ಮಾಡಲು ಸಾಧ್ಯ. ಅಲ್ಲಿ ವರ್ಗಬೇಧವಿಲ್ಲ, ವರ್ಣಬೇಧವಿಲ್ಲ, ಜಾತಿ ಬೇಧವಿಲ್ಲ ಎಂಬ ಸಂದೇಶವನ್ನು ಸಾರಿ ಮಾನವ ಸಮುದಾಯವನ್ನು ಎಲ್ಲ ಅನಿಷ್ಟಗಳಿಂದ ಮುಕ್ತಿಗೊಳಿಸಿ ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವುದೇ ಶರಣರ ಪ್ರಧಾನ ಗುರಿಯಾಗಿತ್ತು ಹಂಬಲವಾಗಿತ್ತು.

**ಸಮಾರೋಪ:** ಸಮಾಜದಲ್ಲಿ ಸ್ವಾತಂತ್ರ್ಯ, ಸಮಾನತೆ ತರಲು ವರ್ಣರಹಿತ, ವರ್ಗರಹಿತ ಸಮಾಜ ನಿರ್ಮಾಣ ಮಾಡಲು ಆರ್ಥಿಕ ಸಮಾನತೆ ಮೇಲುವರ್ಗ ಹಾಗೂ ಕೆಳವರ್ಗದವರಲ್ಲಿ ಸಮಾನತೆಯನ್ನು ತರಲು ಬಸವಣ್ಣನವರು ಲಿಂಗ, ವರ್ಣ, ಬೇಧವಿಲ್ಲದ ಸಮಾನತೆಯನ್ನು ಸಾಧಿಸಿದ ಮಹಾನ್ ಮಾನವತಾವಾದಿ. ಈ ಕಾರಣದಿಂದಾಗಿಯೇ ಬಸವಣ್ಣನವರು ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ಜಾಗತಿಕ ಮಟ್ಟದಲ್ಲಿ ಚಿಂತನೆ ವಿಚಾರಗಳನ್ನು ಹೊಂದಿದ ಅವರ ಹೊಸ ಹೊಸ ಚಿಂತನೆಗಳು ವಿಶ್ವ ಸಾಹಿತ್ಯಕ್ಕೆ ಮಾದರಿಯಾಗಿರುವುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು:**


1. ಬಿ.ಜಿ.ಸಂಕೇಶ್ವರ ಪಬ್ಲಿಶರ– ಬಸವಣ್ಣನವರ ವಚನಗಳು. ಹುಬ್ಬಳ್ಳಿ,1961.
2. ಡಾ. ಶಿವಾನಂದ ಕೆಳಗಿನಮನಿ.–ವಚನ ಸಾಹಿತ್ಯ, ಚೇತನ ಬುಕ್ ಹೌಸ,ಮೈಸೂರು.2011.
3. ಶ್ರೀ.ಜಿ.ವಿ.ಶಾಸ್ತ್ರಿ–ಜಗಜ್ಯೋತಿ ಬಸವಣ್ಣನವರು, ಪಾರು ಪ್ರಕಾಶನ, ಸ್ಟೇಶನ್ ರೋಡ್, ಗದಗ. 2002.
4. ರಮೇಶಸ್ವಾಮಿ ಕನಕಟ್ಟಾ.– ಜೀವನ ದರ್ಶನ, ಕನಕಟ್ಟಾ. ಬಸವ ಸೇವಾ ಪ್ರತಿಷ್ಠಾನ, ಬಿದರ. 2013.
5. ಡಾ.ಎಂ.ಚಿದನಂದಮೂರ್ತಿ – ಬಸವಣ್ಣನವರು, ಸ್ವಪ್ನ ಬುಕ್ ಹೌಸ್,ಗಾಂಧೀನಗರ, ಬೆಂಗಳೂರು, 2003.
6. ಹೆಚ್.ಎ.ಭಿಕ್ಷಾವರ್ತಿಮಠ –ವಚನ ಚಂದನ ಸ್ವರಚಿತ ವಚನಗಳು, ಹೆಚ್.ಎ.ಭಿಕ್ಷಾವರ್ತಿಮಠ. ಸಂಕೇತ ಪ್ರಕಾಶನ, ರಾಣೆಬೆನ್ನೂರು,2017.